ಓಂ ಹ್ರೀಂ ಶ್ರೀಂ

# ಶ್ರೀವಾಸವಿ ಕನ್ಯಕಾ ದೇವಿ ಪುರಾಣ

## ನವಮಾಧ್ಯಾಯ

ಸಾಲಂಕಾಯನ ಮಹರ್ಷಿಯಿಂದ ಸದಾಚಾರ ಮಹಿಮೆಯನ್ನು ಕುರಿತು ಆಲಿಸಿದ ಮಣಿಗುಪ್ತಾದಿಗಳು, 'ಓ ಗುರುವರ್ಯಾ ! ಯಾವ ವಿಧದ ಆಚಾರದಿಂದ ದೇವಿಯು ಸಂತುಷ್ಟಳಾಗಿ ತನ್ನನ್ನು ಸೇವಿಸುವ ಭಕ್ತರನ್ನು ಪಾಲಿಸುವಳೋ, ಯಾವ ಸದಾಚಾರ ಮಹಿಮೆಯನ್ನು ಕುರಿತು ತಾವು ಹೇಳಿದಿರೋ, ಅಂಥಾ ಸದಾಚಾರವನ್ನು ಕುರಿತು ವಿವರವಾಗಿ ಕೇಳ ಬಯಸಿದ್ದೇವೆ. ಮತ್ತೆ, ಯಾವ ಗಾಯತ್ರೀ ತಂತ್ರ ಮಹಿಮೆಯು ವರ್ಣನಾತೀತವೆಂದು ತಾವು ತಿಳಿಸಿದಿರೋ ಅಂಥಾ ಗಾಯತ್ರೀಮಂತ್ರವನ್ನು ಕುರಿತು ವಿಶದವಾಗಿ ನಮಗೆ ಅರುಹಿಸಿ ನಮ್ಮನ್ನು ಧನ್ಯರನ್ನಾಗಿ ಮಾಡಿರೆಂದು', ಪ್ರಾರ್ಥಿಸಿದರು. ಮಣಿಗುಪ್ತಾದಿಗಳ ಪ್ರಾರ್ಥನೆಯನ್ನು ಮನ್ನಿಸಿ ಸಾಲಂಕಾಯನಮಹರ್ಷಿಗಳು ಈ ವಿಧವಾಗಿ ಹೇಳತೊಡಗಿದರು.

### ಸದಾಚಾರ ವಿಧಿಯ ವಿವರಣೆ:

'ಹೇ ವೈಶ್ಯೋತ್ತಮರೇ ! ನಿಮ್ಮ ಧರ್ಮಜಿಜ್ಞಾಸೆಯನ್ನು ಕಂಡು ಮಿಗಿಲಾಗಿ ಸಂತಸಿಸಿದೆನು. ಪೂರ್ವದಲ್ಲಿ ನಾರದನಿಗೆ ಶ್ರೀ ಮನ್ನಾರಾಯಣನೂ ಶೌನಕಾದಿಗಳಿಗೆ ಸೂತ ಮುನಿಯೂ ಹೇಳಿದ ಸದಾಚಾರದ ವಿಧಿವಿಶೇಷಗಳನ್ನು ನಿಮಗೀಗ ನಾನು ವಿವರಿಸುವೆನು. ಇದನ್ನು ಕುರಿತು ಬ್ರಹ್ಮಾಂಡ ಪುರಾಣದಲ್ಲಿ ವ್ಯಾಸಮುನೀಂದ್ರರಿಂದ ಸವಿಸ್ತಾರವಾಗಿ ಹೇಳಲ್ಪಟ್ಟಿದೆ, ನಾನು ಆ ವಿಷಯಗಳನ್ನು ಅತ್ಯಂತ ಸಂಕ್ಷಿಪ್ತವಾಗಿ ನಿಮಗೆ ತಿಳಿಸಿಕೊಡುವೆನು. ಶ್ರದ್ಧಾಳುಗಳಾಗಿ ಆಲಿಸಿರಿ. **ಸದಾಚಾರವು ಲೌಕಿಕ ಮತ್ತು ಶಾಸ್ತ್ರೀಯವೆಂದು ಎರಡು ಬಗೆಯಾ ಗಿವೆ.** ತನ್ನ ಶ್ರೇಯಸ್ಸಿಗಾಗಿ ಮನುಷ್ಯನು ಈ ಎರಡನ್ನೂ ಆಚರಿಸಬೇಕು. ಧೀಮಂತರು "ಗ್ರಾಮಧರ್ಮ, ವರ್ಣಧರ್ಮ, ಸಮಾಜಧರ್ಮ, ದೇಶಧರ್ಮ"

ಎಂಬ ಧರ್ಮಗಳನ್ನು ಆಚರಿಸಬೇಕು. **ವೇದೋಕ್ತವಾದುದೇ** ಸದ್ಧರ್ಮವೆಂದು ತಿಳಿಯಬೇಕು. ದ್ವಿಜನಾದವನು ಬೆಳಗಿನ ಜಾವದಲ್ಲಿ ಎಚ್ಚರಗೊಂಡು ಸದ್ಧರ್ಮವೆಂದು ತಿಳಿಯಬೇಕು. ದ್ವಿಜನಾದವನು ಬೆಳಗಿನ ಜಾವದಲ್ಲಿ ಎಚ್ಚರಗೊಂಡು ಪ್ರತಿನಿತ್ಯ ನಡೆಸಬೇಕಾದ ಅವಶ್ಯ ಕರ್ತವ್ಯಗಳನ್ನು ಮಹರ್ಷಿಗಳು ನುಡಿದ ರೀತಿಯಲ್ಲಿ ನಿಮಗೆ ತಿಳಿಸುತ್ತಿರುವೆನು. ಮಾನವನು ಪ್ರಾತಃಕಾಲ ದಲ್ಲಿ ಎಚ್ಚರಗೊಳ್ಳಬೇಕು. ಕೂಡಲೇ ಶುಭಕರವಾದ ಒಂದು ವಸ್ತುವನ್ನು ದರ್ಶಿಸಬೇಕು ದೀಪ, ಬಂಗಾರ, ಖಡ್ಗ, ಸಮುದ್ರ. ಹಚ್ಚಹಸುರಿನ ಗದ್ದೆ, ಮೇಘದಿಂದಾವೃತವಾದ ಪರ್ವತ, ಕರುವಿನೊಡಗೂಡಿದ ಹಸು, ಧರ್ಮ ಪತ್ನಿ ಅಥವಾ ತನಗೆ ವಿಶೇಷವಾಗಿ ಪ್ರಿಯವಾದ ವ್ಯಕ್ತಿ, ತನ್ನ ಬಲಗೈಯ್ಯಿನ ಅಂಗೈ ಮೊದಲಾದವು ಮಂಗಳಕರ ವಸ್ತುಗಳೆಂದು ಹಿರಿಯರು ಹೇಳಿರುವರು. ಪ್ರಭಾತ ಸಮಯದಲ್ಲಿ ಸ್ವೀಯ ಕರದರ್ಶನವು ಅತ್ಯಂತ ಸುಲಭಸಾಧ್ಯ.

ಶ್ಲೋ ॥ ಕರಾಗ್ರೇ ವಸತೇ ಲಕ್ಷ್ಮೀ ಕರಮಧ್ಯೇ ಸರಸ್ವತೀ ॥
ಕರಮೂಲೇ ತು ಶ್ರೀ ಕನ್ಯಾ ಪಭಾತೇ ಕರದರ್ಶನಮ್ ॥ ಎಂದು
ಪಠಿಸುತ್ತಾ ಕರದರ್ಶನವನ್ನು ಮಾಡಬೇಕು. ಆ ಬಳಿಕ

ಶ್ಲೋ ॥ ಸಮುದ್ರವಸನೇ ದೇವಿ ಪರ್ವತಸ್ಥನ ಮಂಡಲೇ ॥
ವಿಷ್ಣುಪತ್ನಿ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವಮೇ ॥॥ ಎಂದು
ಹೇಳಿ ಭೂದೇವಿಗೆ ನಮಸ್ಕರಿಸಿ ಹಾಸಿಗೆಯ ಮೇಲಿಂದ ನೆಲದ ಮೇಲೆ

ಕಾಲನ್ನಿಡಬೇಕು. ಆನಂತರ ದೇಶ ಕಾಲ ಪಾತ್ರಾದಿಗಳನ್ನು ಅರಿತು ಶೌಚ ಕ್ರಿಯೆಯನ್ನು ನಿರ್ವಹಿಸಬೇಕು. ಆ ಬಳಿಕ ಆಚಮನ ಮಾಡಿ ಮುಖಪ್ರಕ್ಷಾಳನ ಮಾಡಿಕೊಳ್ಳಬೇಕು. ದೇಹಶುದ್ಧಿಗಾಗಿ ಸ್ನಾನಮಾಡಬೇಕು. ಸ್ನಾನಮಾಡುವಾಗ

ಶ್ಲೋ ॥ ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ ।
ನರ್ಮದೇ ಸಿಂಧು ಕಾವೇರಿ ಜಲೇ ಸ್ಮಿನ್ ಸನ್ನಿಧಿಂ ಕುರು ॥ ಎಂದು

ನುಡಿದು ಸಮಸ್ತ ಪುಣ್ಯ ನದೀಜಲಗಳನ್ನು ತಾನು ಸ್ನಾನ ಮಾಡುವನೀರಿನಲ್ಲಿ ವಾಸಿಸಿರೆಂದು ಪ್ರಾರ್ಥಿಸಬೇಕು. ಸ್ನಾನದಿಂದ ಶರೀರ ಶುದ್ಧಿಯೇ ಅಲ್ಲದೇ ಮಲಿನ ಕರ್ಮಗಳ ಪಾಪಗಳು ಕೂಡ ತೊಲಗಿ ಹೋಗುವುವು. ಸ್ನಾನದ ನಂತರ ಶುದ್ಧ ವಸ್ತ್ರಗಳನ್ನು ಧರಿಸಿ ದೇವ, ಋಷಿ, ಪಿತೃಗಳ

ಪ್ರೀತಿಗಾಗಿ ಅರ್ಘ್ಯಪ್ರದಾನಗಳನ್ನು ಆಚರಿಸಬೇಕು. ಆನಂತರ ಯಥಾವಿಧಿಯಾಗಿ ವಿಭೂತಿ, ಕುಂಕುಮ, ತಿಲಕಗಳನ್ನು ರುದ್ರಾಕ್ಷಿಮಾಲಾಗಳನ್ನು ಧರಿಸಬೇಕು.

ರುದ್ರಾಕ್ಷಿಗಳುರುದ್ರನನೇತ್ರಗಳಿಂದಪ್ರಭವಿಸಿವೆಯೆಂದುಹಿರಿಯರನುಡಿ.ರುದ್ರಾಕ್ಷಿಧಾರಣೆಯು ಶಿವಜ್ಞಾನಕ್ಕೆ ಪರಮಸಾಧನ. ಎಲ್ಲ ಆಶ್ರಮದವರೂ ಎಲ್ಲ ವರ್ಣದ ವರೂ ರುದ್ರಾಕ್ಷಿಗಳನ್ನು ಧರಿಸಬಹುದು.

ಸದಾಚಾರಪರರು ತಮ್ಮ ಇಚ್ಛಾನುಸಾರವಾಗಿ ತುಳಸೀ ಮಾಲೆಗಳನ್ನು, ಸ್ಪಟಿಕ ಹಾರ ಗಳನ್ನು ಕೂಡ ಧರಿಸಬಹುದು. ತುಳಸಿ ಧಾರಣೆಯಿಂದ ಶಾಂತಗುಣ, ಸಾಧುತ್ವಗಳು ಬೆಳೆಯಬಲ್ಲವು, ಸ್ಫಟಿಕಧಾರಣೆಯಿಂದಕಾರ್ಯದೀಕ್ಷೆ,ದೃಢತ್ವಗಳುವೃದ್ಧಿಹೊಂದುವುವು.ರುದ್ರಾಕ್ಷಿ,ತುಳಸಿಸ್ಫಟಿಕಗಳಿಂದ ಪವಿತ್ರತೆ,ನಿರ್ಮಲತ್ವ,ಆಧ್ಯಾತ್ಮಿಕಜ್ಞಾನಾಭಿವೃದ್ಧಿಉಂಟಾಗವುದೇಅಲ್ಲದೇಅನೇಕಶಾರೀರಿಕವ್ಯಾಧಿಗಳು ಉಪಶಮನವಾಗುವುವು.' 'ವೈಶ್ಯಶ್ರೇಷ್ಠರೇ ! ಪದ್ಮಪುರಾಣದ ಉತ್ತರಕಾಂಡದಲ್ಲಿ ತುಲಸೀಮಹತ್ವವನ್ನುಸವಿವರವಾಗಿ ತಿಳಿಸಲ್ಪಟ್ಟಿದೆ. ಈಗ ಪುಣ್ಯಪ್ರದವಾದ ಸಂಧ್ಯೋಪಾಸನೆಯನ್ನು ಕುರಿತುಕೇಳಿರಿ.ಪ್ರಭಾತಸಮಯದಲ್ಲಿಪ್ರಾತಃಸಂಧ್ಯೆಯನ್ನು,ಸೂರ್ಯನುನಡುನೆತ್ತಿಯಮೇಲಿರುವಾಗ ಮಧ್ಯಾಹ್ನ ಸಂಧ್ಯೆಯನ್ನು. ರವಿಯು ಅಸ್ತಮಿಸುವ ಮೊದಲೇ ಸಾಯಂಸಂಧ್ಯೆಯನ್ನು ಮಾನವನು ಉಪಾಸಿಸಬೇಕು. ಸಂಧ್ಯೋಪಾಸನೆಯಲ್ಲಿ ಗಾಯತ್ರಿಯನ್ನು ಉಪಾಸಿಸುವುದು ಬಲುಮುಖ್ಯವಾಗಿದೆ. **ಗಾಯತ್ರೀ ಸಮರ್ಚನೆಯು ಸರ್ವವೇದ ಸಾರಭೂತವಾದುದು. ಗಾಯತ್ರಿಯು ಶ್ರೀಕನ್ಯಾ ದೇವಿಗೆ ಅಪರರೂಪವೇ ಎಂದು ತಿಳಿಯಲಾಗುವುದು.** ಸಂಧ್ಯೋಪಾಸನೆಯ ಅಂಗವಾಗಿ ಹಣೆಯಲ್ಲಿ ಅವರವರ ಸಂಪ್ರದಾಯಗಳನ್ನು ಅನುಸರಿಸಿ ತಿಲಕವನ್ನುಧರಿಸುವುದು ಉತ್ತಮ ಕರ್ತವ್ಯವು. ಹಣೆಯಲ್ಲಿ ಧರಿಸುವ ವಿಭೂತಿಯ ಹಿರಿತನವು ವಿಶಿಷ್ಟವಾದುದು. ಆದ್ದರಿಂದ **ಭಸಿತ**ವೆಂದು. ಪಾಪಗಳನ್ನು ಭಸ್ಮಮಾಡುವುದಾದ್ದರಿಂದಭಸ್ಮವೆಂದುಅಣಿಮಾದಿವಿಭೂತಿಗಳನ್ನುಉಂಟುಮಾಡುವುದಾದ್ದರಿಂದ **ವಿಭೂತಿ**ಯೆಂದು ರಕ್ಷಣೆಯನ್ನು ನೀಡುವುದಾದ್ದರಿಂದ ರಕ್ಷಕಿಯೆಂದು ಈ ವಿಭೂತಿ ಭಸ್ಮವು ಕರೆಯಲ್ಪಡುತ್ತಿದೆ.

ಹಣೆಯಲ್ಲಿ **ಊರ್ಧ್ವಪುಂಡ್ರ**ಗಳನ್ನು ಧರಿಸುವವರು ಬೆಳಗುತ್ತಿರುವ ದೀಪಶಿಖೆ ಯಂತಾಗಲೀ, ಬಿದುರೆಲೆಯಂತಾಗಲೀ, ಕಮಲದ ಮೊಗ್ಗಿನಂತಾಗಲೀ, ತ್ರಿಶೂಲದಂತಾಗಲೀ, ಪೂರ್ಣಚಂದ್ರನಂತಾಗಲೀ, ಚತುಷ್ಕೋನಯುತವಾಗಿಯಾಗಲೀ ಅವರವರ ಸಂಪ್ರದಾಯಗಳನ್ನು ಹಿಡಿದು ಇವುಗಳನ್ನು ಧರಿಸುವರು.

ಹಾಗಲ್ಲದೇ **ಕುಂಕುಮತಿಲಕ ಧಾರಣೆ** ಮಾಡುವವರು ಹಣೆಯಲ್ಲಿ ಎರಡು ಕಣ್ಣುಗಳ ತುದಿಗಳವರೆಗೂ ವಿಭೂತಿಯನ್ನು ಧರಿಸಿ, ತ್ರಿಕೂಟಿ ಅಥವಾ ಅಮೃತ ಪ್ರದೇಶವೆನಿಸಲ್ಪಡುವ **ಭೃಕುಟೀ ಮಧ್ಯದಲ್ಲಿ** ಚಂದನದಿಂದ ಕೂಡಿದ ಕುಂಕುಮವನ್ನು ಚಂದ್ರಬಿಂದಾಕೃತಿಯೊಡನೆ ತಿಲಕವಾಗಿ ಧರಿಸಬೇಕು. ಶ್ರೀದೇವಿಯಾದ ಪರಾಂಬಿಕೆಯು ಇಂಥ ತಿಲಕಧಾರಣೆ ಮಾಡುವವರ ಯೋಗಕ್ಷೇಮಗಳನ್ನು ವಹಿಸಿ, ಅವರಿಗೆ ಕೈವಲ್ಯವನ್ನು ಪ್ರಸಾದಿಸುವಳೆಂದು ಲಲಾಟದಲ್ಲಿ ಕುಂಕುಮವನ್ನು ಧರಿಸುವುದು ಶ್ರೀಕನ್ಯಾ ದೇವಿಗೆ ಪ್ರೀತಿಕರವೆಂದು ಹಿರಿಯರು ವಿಶದವಾಗಿ ತಿಳಿಸಿರುವರು **ತ್ರಿಪುಂಡ್ರ, ಊರ್ಧ್ವಪುಂಡ್ರ ಕುಂಕುಮ ತಿಲಕಾದಿಗಳನ್ನು ಅವರವರ ಸಂಪ್ರದಾಯಗಳನ್ನು ಅನುಸರಿಸಿ ಸದಾಚಾರಿಗಳು ಧರಿಸುತ್ತಿರುವರು.** ಈ ವಿಧದಲ್ಲಿ ತಿಲಕ ಗಳನ್ನಿಟ್ಟುಕೊಳ್ಳುವುದನ್ನು ಶಿರೋವ್ರತವೆಂದು ಕರೆಯುವರು. ಅಥರ್ವಶೀರ್ಷೋಪನಿ ಷತ್ತಿನಲ್ಲಿ ಈ **ಶಿರೋವ್ರತವನ್ನು** ಕುರಿತು ವಿಪುಲವಾಗಿ ಹೇಳಲ್ಪಟ್ಟಿದೆ. ಶಿರೋವ್ರತವು ಯತಿಗಳಿಗೆ ಜ್ಞಾನವನ್ನು ವಾನಪ್ರಸ್ಥಿಗಳಿಗೆ ವೈರಾಗ್ಯವನ್ನು, ಗೃಹಸ್ಥರಿಗೆ ಧರ್ಮಮಾರ್ಗವನ್ನು ಬ್ರಹ್ಮ ಚಾರಿಗಳಿಗೆ ಸ್ವಾಧ್ಯಾಯವನ್ನು ಪ್ರಸಾದಿಸುವುದು. ಗೃಹಸ್ಥರಿಗೆ ಧರ್ಮಮಾರ್ಗವನ್ನು ಬ್ರಹ್ಮ ಚಾರಿಗಳಿಗೆ ಸ್ವಾಧ್ಯಾಯವನ್ನು ಪ್ರಸಾದಿಸುವುದು. ದೇವತೆಗಳು ಕೂಡ ರಕ್ಷತೆಗೆ ಭದ್ರತೆಗೆ ಪವಿತ್ರತೆಗೆ ತಿಲಕಧಾರಣೆ ಮಾಡುವರೆಂದು ಶಾಸ್ತ್ರಗಳು ತಿಳಿಸಿಕೊಟ್ಟಿವೆ.

ಹೀಗೆ ತಿಲಕಧಾರಣೆ ಮಾಡಿದ ಮೇಲೆ ಒಂದು ಪವಿತ್ರ ಸ್ಥಳದಲ್ಲಿ ಕುಳಿತುಕೊಂಡು ಉತ್ತಮವಾದ ಆಚಮನ ಕ್ರಿಯೆಸಹಿತ ಸಂಧ್ಯಾವಂದನೆಯನ್ನು ಪ್ರಾರಂಭಿಸಬೇಕು. **ಆಚಮನ ಕ್ರಿಯೆಯು ವೈದಿಕ, ಶ್ರೌತ, ಶುದ್ಧ, ಪೌರಾಣಿಕ ಸ್ಮಾರ್ತ, ತಾಂತ್ರಿಕ ಎಂದು ಆರು ವಿಧಗಳಲ್ಲಿ ಆಚರಿಸಲ್ಪಡುವುದು.** ತಮ್ಮ ತಮ್ಮ ಸಾಂಪ್ರದಾಯಿಕ ಸಂದರ್ಭಗಳನ್ನು ಅನುಸರಿಸಿ ಆಚಮನವನ್ನು ಆಚರಿಸಬೇಕು.

ಅನಂತರ **ಓಂಕಾರವನ್ನು** ತನ್ನ ಹೃದಯದಲ್ಲಿ ಸ್ಮರಿಸುತ್ತ ತ್ರಿಪಾದಗಾಯತ್ರಿಯನ್ನು ಜಪಿಸುತ್ತ ಪ್ರಾಣಾಯಾಮವನ್ನು ಆಚರಿಸಬೇಕು **ಪೂರಕ – ಕುಂಭಕ – ರೇಚಕಗಳೆಂಬ** ಕ್ರಿಯೆಗಳಿಂದ ಕೂಡಿದ ಪ್ರಾಣಾಯಾಮವನ್ನು ಆಚರಿಸಬೇಕು ಪ್ರಾಣಾಯಾಮ ಪ್ರಕ್ರಿಯೆಯನ್ನು ಗುರುಮುಖೇನ ತಿಳಿದುಕೊಂಡು ಅಭ್ಯಾಸಮಾಡಿ ಆಚರಿಸಬೇಕು. **ಪ್ರಾಣಾಯಾಮವು ಪ್ರಣವಾತ್ಮಕವು.** ಪರಮಾತ್ಮನು ಪ್ರಣವಸ್ವರೂಪನು ಆದ್ದರಿಂದ ಪ್ರಾಣಾಯಾಮವು ಪರಮಾತ್ಮ ಸ್ವರೂಪವೆ ಆಗುವುದೆಂದು ಬಲ್ಲವರು ಹೇಳುವರು. ಇದು

ಪ್ರಾಣಶಕ್ತಿಯನ್ನು ವೃದ್ಧಿಪಡಿಸುವುದು. ಬಳಿಕ ಶ್ಲೋಕ ಗುರುರ್ಬ್ರಹ್ಮ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ ಗುರುದೇವ ಪರಂಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ ಎಂಬ ಗುರುಮಂತ್ರದಿಂದ ಗುರುಧ್ಯಾನವನ್ನು ಮಾಡಬೇಕು. ತರುವಾಯ ಕಾಲ ಸಂಕೀರ್ತನರೂಪವಾದ ಸಂಕಲ್ಪವನ್ನು ಹೇಳಿಕೊಂಡು **ಮಾರ್ಜನವನ್ನು** ಆಚರಿಸಿ **ಜಲಪ್ರಾಶನ** ಮಾಡಬೇಕು. ಒಳಗಿನ ದೋಷಗಳನ್ನು, ಪಾಪಗಳನ್ನು ಹರಿಸುವುದಕ್ಕಾಗಿ ಪುನಃಮಾರ್ಜನವನ್ನು ಆಚರಿಸಬೇಕು. ಅನಂತರ ಗಾಯತ್ರೀಮಂತ್ರದಿಂದ ಅಭಿಮಂತ್ರಿಸಿದ **ಜಲಾಂಜಲಿಯನ್ನು** ಸೂರ್ಯ ದೇವನಿಗೆ ಮೂರು ಬಾರಿಅರ್ಘ್ಯನೀಡಬೇಕು. ಆ ಬಳಿಕ "ಅಸಾವಾದಿತ್ಯೋ ಬ್ರಹ್ಮ" ಎಂದು ನೀರನ್ನು ಪ್ರದಕ್ಷಿಣೀಕರಿಸಬೇಕು.

ಮಧ್ಯಾಹ್ನದಲ್ಲಿ ಒಂದೇ ಬಾರಿ ಅರ್ಘ್ಯವನ್ನು ನೀಡಬೇಕು. ಸಂಧ್ಯೆಗಳಲ್ಲಿ ಮೂರು ಬಾರಿ ಅರ್ಘ್ಯಕೊಡಬೇಕು. ಗಾಯತ್ರೀದೇವಿಯನ್ನು ಆವಾಹನೆ ಮಾಡಿ ಹೃದಯದಲ್ಲಿ ಧ್ಯಾನಿಸಿ ಬಳಿಕ ಯಥಾಶಕ್ತಿ ಮಂತ್ರಜಪವನ್ನು ಆಚರಿಸಬೇಕು. ಅಂಗನ್ಯಾಸ ಕರನ್ಯಾಸಗಳನ್ನು ಮಾಡಿದರೂ, ಮಾಡದಿದ್ದರೂ ಕೃಪಣತ್ವವಿಲ್ಲದ ಒಳ್ಳೆಯ ಮನಸ್ಸಿನಿಂದ ಸಚ್ಚಿದಾನಂದ ಸ್ವರೂಪಿಣಿಯಾದ ಗಾಯತ್ರೀದೇವಿಯನ್ನು ಧ್ಯಾನಿಸಿ ಜಪಿಸುವವರು ಅನಂತಫಲಗಳನ್ನು ಹೊಂದುವರು. "ಓಂ **ಭೂರ್ಭುವಸ್ಸುವಃ ತತ್ಸವಿತು ರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್**" ॥ ಎಂಬೀ ಮಂತ್ರವು ಗಾಯತ್ರೀ ಮಂತ್ರವು.

ಇದು ಉಪನಯನ ಕಾಲದಲ್ಲಿ ಗುರುಗಳಿಂದ ಉಪದೇಶಿಸಲ್ಪಡುವುದರಿಂದ "**ಗುರುಮಂತ್ರ**" ವೆಂದು **ಬ್ರಹ್ಮೋಪದೇಶ**ವೆಂದು ನುಡಿಯಲ್ಪಡುತ್ತಿದೆ ಇದೇ ತ್ರಿಪಾದಗಾಯತ್ರಿ (ಬ್ರಹ್ಮಗಾಯತ್ರಿ). ಇದುವೇ ಜಪಗಾಯತ್ರಿಯೇಂದು ಪ್ರಸಿದ್ಧವಾಯಿತು. ಇದನ್ನು ಕರ್ಮಗಾಯತ್ರಿ, ಪ್ರಕಟಗಾಯತ್ರಿ ಎಂದು ಕೂಡಪ್ರಾಜ್ಞರು ನುಡಿಯುವರು. ಇದರಲ್ಲಿಸಮಸ್ತ ಯೋಗರಹಸ್ಯಗಳು, ವೇದವೇದಾಂತ ರಹಸ್ಯಗಳು ಅಡಗಿವೆ. ಮಾನವನು ತುರೀಯಾಶ್ರಮದಲ್ಲಿ ಪ್ರವೇಶಿಸಿದಾಗ ಈ ಗಾಯತ್ರಿ ಮಂತ್ರದ ನಾಲ್ಕನೆಯ ಪಾದವನ್ನುಸೇರಿಸಿ ಜಪಿಸ ಬೇಕು. **ಆ ಚತುಷ್ಪಾದ ಗಾಯತ್ರಿಯನ್ನು ಪೂರ್ಣಗಾಯತ್ರಿ ಎನ್ನುವರು.** ಈ ಗುಪ್ತ ಗಾಯತ್ರಿವಿವರಣೆಯು "ಪಂಚದಶೀ" ಮತ್ತು "ವರವಸ್ಯಾರಹಸ್ಯ" ಗಳಲ್ಲಿದೆ. ಗಾಯತ್ರೀ ಮಂತ್ರಜಪವು ಇಹಪರ ಸೌಖ್ಯದಾಯಕವು.

ಗಾಯತ್ರೀ ಆದಿಕನ್ಯೆಯಾದ ಯೋಗಮಾಯಾಸ್ವರೂಪಿಣಿ ಈ ಶಕ್ತಿಯೇ ಕಲಿಯುಗದಲ್ಲಿ ಸತ್ಯಾಹಿಂಸೆಗಳಿಂದ, ಶಾಂತಿತ್ಯಾಗಕಾರುಣ್ಯಗಳಿಂದ ವಿನೂತನ ವಿಧಾನದಲ್ಲಿ ಲೋಕದಲ್ಲಿ ಧರ್ಮಪ್ರತಿಷ್ಠಾಪನೆ ಮಾಡುವುದಕ್ಕಾಗಿ ಶ್ರೀ ಕುಸುಮಶ್ರೇಷ್ಠಿಯ ಸದನದಲ್ಲಿ ಶ್ರೀವಾಸವಿ ಕನ್ಯಕಾ ನಾಮದಲ್ಲಿ ಅವತರಿಸಿದಳು.

"ಆದಿಶಕ್ತ್ಯೈ ಚ ವಿದ್ಮಹೇ ವಾಸವೀದೇವಿ ಧೀಮಹಿ

ತನ್ನಃ ಕನ್ಯಾ ಪ್ರಚೋದಯಾತ್"

ಎಂದು ಶ್ರೀ ವಾಸವೀ ಗಾಯತ್ರಿಯನ್ನು ಜಪಿಸುವವರಿಗೂ ಕೂಡ ಮೇಲೆ ತಿಳಿಸಿದ ಸಮಸ್ತ ಫಲಗಳು ಲಭಿಸುವುವು. ಸಂಧ್ಯಾವಂದನೆಯಂದು ಗಾಯತ್ರೀಜಪವನ್ನು ಆಚರಿಸಿದ ತರುವಾಯ ಗಾಯತ್ರೀ ತರ್ಪಣವನ್ನು ಆಚರಿಸಬೇಕು. ಆ ಬಳಿಕ ಭೂಮಿಗೆ ನಮಸ್ಕಾರ ಮಾಡಬೇಕು. ದ್ವಿಜರು ತಮ್ಮ ಗೋತ್ರ ಋಷಿನಾಮಗಳುಳ್ಳ ಪ್ರವರವನ್ನು ಹೇಳಿ ನಮಸ್ಕರಿಸಬೇಕು. ಈ ವಿಧದಲ್ಲಿ ಪ್ರಾತಃ ಕಾಲದಲ್ಲಿ ಸಂಧ್ಯಾವಂದನೆಯು ವಿಧಿಸಲ್ಪಟ್ಟಿದೆ.

ಸಂದ್ಯಾವಂದನೆಯು ಮುಗಿದ ಬಳಿಕ ಅಗ್ನಿಕಾರ್ಯವನ್ನು ಆಚರಿಸಬೇಕು. ಆನಂತರ ಸಾವಧಾನ ಚಿತ್ತದಿಂದ **ಪಂಚಾಯತನ ಪೂಜೆಯನ್ನು** ನೆರವೇರಿಸಬೇಕು. ಮಧ್ಯದಲ್ಲಿ ಶ್ರೀ ಕನ್ಯಕಾ ಪರಮೇಶ್ವರಿಯನ್ನು, ಈಶಾನ್ಯದಲ್ಲಿ ವಿಷ್ಣುವನ್ನು ಆಗ್ನೇಯದಲ್ಲಿ ಶಿವನನ್ನು, ನೈರುತ್ಯದಲ್ಲಿ ಗಣಪತಿಯನ್ನು ವಾಯವ್ಯದಲ್ಲಿ ಸೂರ್ಯನನ್ನು ಇಟ್ಟು ಅರ್ಚಿಸಬೇಕು.

ಓ ವೈಶ್ಯಪುಂಗವರೇ ! ಉದಯಕಾಲದಲ್ಲಿ ಮಾಡಿದಂತೆಯೇ, ಮಧ್ಯಾಹ್ನ ಸಾಯಂಕಾಲಗಳಲ್ಲಿ ಕೂಡ ವಿದ್ಯುಕ್ತವಾಗಿ ಸಂಧ್ಯಾವಂದನೆಯನ್ನು ಮಾತ್ರ ಮಾಡಬೇಕು.

ಗೃಹಸ್ಥಿಗಳಿಗೆ ಬ್ರಹ್ಮಯಜ್ಞ – ದೇವಯಜ್ಞ – ಪಿತೃಯಜ್ಞ – ಮನುಷ್ಯಯಜ್ಞ(ಅತಿಥಿಯಜ್ಞ) – ಭೂತಯಜ್ಞ ಎಂಬ **ಪಂಚಯಜ್ಞಗಳು** ವಿಧಿಸಲ್ಪಟ್ಟಿವೆ. ಬ್ರಹ್ಮನಿಷ್ಠೆ ಬ್ರಹ್ಮೋ ಪಾಸನೆ, ಬ್ರಹ್ಮತತ್ವ ವಿಚಾರ, ಪ್ರಣವಧ್ಯಾನ, ಉಪನಿಷತ್ಪಾರಾಯಣ ಗೀತಾಪಾರಾಯಣ ಮುಂತಾದುವು "ಬ್ರಹ್ಮಯಜ್ಞ" ವೆನಿಸುವುದು.

ಪ್ರಾತಃ ಸಾಯಂಕಾಲಗಳಲ್ಲಿ ಅಗ್ನಿಕಾರ್ಯವನ್ನು ಮಾಡಿ ಇಂದ್ರಿಯಗಳಿಗೆ ಇಂದ್ರಿಯಾಧಿವತೆಗಳಿಗೆ ಹವಿರ್ಭಾಗವನ್ನು ನೀಡುವುದು **"ದೇವಯಜ್ಞ"** ವೆನಿಸುವುದು. ಪ್ರತಿಗೃಹದಲ್ಲೂ ಮಾಡಲ್ಪಡುವ ಈ ಯಜ್ಞಗಳ ಧೂಮದಿಂದ ದೇಹಬಲ, ಬುದ್ಧಿಬಲ ಹೆಚ್ಚುವುವು.

ವಾತಾವರಣ ಕಾಲುಷ್ಯವು ಅಳಿದುಹೋಗುವುದು. ವಾಯುವು ಪರಿಶುದ್ಧವಾಗಿ ಜೀವಿಗಳಿಗೆ ಆರೋಗ್ಯವುಂಟಾಗುವುದು. ದೈವಕೃಪೆಯುಂಟಾಗುವುದು. ಹೀಗೆ ಸಮಸ್ತ ಶ್ರೇಯಸ್ಸುಗಳು ಪ್ರಾಪ್ತಿಯಾಗುವುವು.

ನಮಗೆ ದೇಹಜನ್ಮವನ್ನು ಪ್ರಸಾದಿಸುವ ಮಾತಾಪಿತೃಗಳು, ಜ್ಞಾನಜನ್ಮವನ್ನು ಪ್ರಸಾದಿಸುವ ಗುರು ಮತ್ತು ಪಿತೃಸಮಾನರದ ಇತರ ಹಿರಿಯರಿಗೆ ಸೇವೆ ಸಲ್ಲಿಸುವುದು, ಪೋಷಿಸುವುದು ಎಂಬಿವೆಲ್ಲ "**ಪಿತೃಯಜ್ಞ**" ವೆನಿಸುವುದು.

ನಮ್ಮ ಗೃಹಗಳಿಗೆ ಬರುವ ಲೋಕೋಪಕಾರಪರಾಯಣರಾದ ಹಿರಿಯರು ವಿದ್ವಾಂಸರು, ಸ್ವಾಮಿಗಳು, ಮಿತ್ರರು ಮೊದಲಾದ ಸಜ್ಜನರಿಗೆ ಆತಿಥ್ಯವನ್ನಿತ್ತು ಸತ್ಕರಿಸುವುದು "**ಅತಿಥಿಯಜ್ಞ**" ವೆನಿಸುವುದು.

ಸಮಾಜದ ಸೌಭಾಗ್ಯಕ್ಕೆ ಉಪಯೋಗವಾಗುವ ಗೋವುಗಳು, ಅಶ್ವಗಳು ಶ್ವಾನಗಳು. ಕುರಿಗಳು, ಮೇಕೆಗಳು ಇತ್ಯಾದಿ ಪ್ರಾಣಿಗಳನ್ನು ಕೋಳಿಗಳು, ಕಾಗೆಗಳು, ಪಾರಿವಾಳಗಳು, ಗಿಳಿಗಳು ಇತ್ಯಾದಿ ಪಕ್ಷಿಗಳ ರೂಪದ ಪ್ರಾಣಿಗಳನ್ನು ಪೋಷಿಸುವುದು **ಭೂತಯಜ್ಞ** ವೆನಿಸುವುದು. ಅವುಗಳನ್ನು ಆಚರಿಸಬೇಕು.

ಪ್ರತಿದಿನವೂ ಗೃಹಸ್ಥಿಗಳು ಮಾಡುವ ಗೃಹಕೃತ್ಯಾದಿಗಳಿಂದ ಕ್ರಿಮಿಕೀಟಗಳು ಮರಣಿಸುತ್ತಿರುತ್ತವೆ. ಇಂಥ ಚರ್ಯೆಗಳಿಂದ ಪ್ರಾಪ್ತವಾಗುವ ಪಾಪಗಳನ್ನು ಅವರು ಕಳೆದು ಕೊಳ್ಳಬೇಕು. ಸೊಪ್ಪು, ತರಕಾರಿ, ಪತ್ರೆ, ಹಣ್ಣುಗಳು ಮೊದಲಾದ ಪದಾರ್ಥಗಳನ್ನು ಅಗ್ನಿಯಲ್ಲಿ ಹಾಕಿ ದೇವತೆಗಳಿಗೆ ಸಮರ್ಪಿಸಿದ ತರುವಾಯವೇ ಭುಜಿಸಬೇಕು. ಅಗ್ನಿ ಕಾರ್ಯಗಳನ್ನು ಮಾಡದವರು ತಾವು ಮಾಡುವ ನಿತ್ಯಪೂಜೆಯಲ್ಲಿ ಆಹಾರ ಪದಾರ್ಥಗಳನ್ನು ದೇವತೆಗಳಿಗೆ ನಿವೇದನೆಯಾಗಿ ಸಮರ್ಪಿಸಿದ ಬಳಿಕ ಮಾತ್ರವೇ ತಾವು ಆಹಾರವನ್ನು ಸ್ವೀಕರಿಸಬೇಕು. ತಾಯಿ-ತಂದೆ-ಗುರು-ಸೋದರರು - ಸೇವಕರು - ಆಶ್ರಿತರು - ಅತಿಥಿಗಳು - ಅಭ್ಯಾಗತರು - ಅಗ್ನಿ ಇವರೆಲ್ಲರೂ ಗೃಹಸ್ಥನಾದ ಯಜಮಾನನಿಂದ ಚೆನ್ನಾಗಿ ಪೂಜಿಸಲ್ಪಡ ಬೇಕಾದವರು. ಪೋಷಿಸಲ್ಪಡಬೇಕಾದವರು.

ಪಾಪರಹಿತರೇ ! ಪ್ರತಿಯೊಬ್ಬರೂ ಋಣತ್ರಯವಿಮುಕ್ತರಾಗಬೇಕು. ಪ್ರತಿಯೊಬ್ಬರಿಗೂ ದೇವಋಣ – ಋಷಿಋಣ – ಪಿತೃಋಣ ಎಂದು ಮೂರು ಋಣಗಳಿರುವುವು. ಮಾನವನು ಬ್ರಹ್ಮಚರ್ಯದಿಂದ ಋಷಿಋಣದಿಂದಲೂ ವಿಮುಕ್ತನಾಗಬಲ್ಲನು.' ಹೀಗೆ ಸಾಲಂಕಾಯನರಿಂದ ಸದಾಚಾರವಿಧಾನವನ್ನೂ ಮತ್ತು ಗಾಯತ್ರೀ ಮಂತ್ರ ಮಹತ್ವವನ್ನು ಕೇಳಿದ ಮಣಿಗುಪ್ತಾದಿಗಳು ಸಂತುಷ್ಟರಾಗಿ ಶ್ರೀ ವಾಸವಿ ವಿರೂಪಾಕ್ಷರ ಅನಂತರದ ಕಥೆಯನ್ನು ತಿಳಿಯಲಾಶಿಸಿ ಆ ಮುನಿವರರೊಡನೆ, 'ಹೇ ಗುರುದೇವಾ ! ಉಪನಯನ ವೇದಾ ರಂಭ ಸಂಸ್ಕಾರಗಳನ್ನು ಹೊಂದಿದ ವಾಸವಿ ವಿರೂಪಾಕ್ಷರ ವಿದ್ಯಾಭ್ಯಾಸವು ಹೇಗೆ ಸಾಗಿತು? ಮತ್ತೇನಾಯಿತು? ಈ ವೃತ್ತಾಂತಗಳನ್ನು ನಮಗೆ ದಯೆಯಿಂದ ತಿಳಿಸಿಕೊಡಿ', ಎಂದು ಪ್ರಾರ್ಥಿಸಿದರು. ಆಗ ಸಾಲಂಕಾಯನ ಮಹರ್ಷಿಯು ಅವರಿಗೆ ಈ ರೀತಿ ಹೇಳತೊಡಗಿದರು. ಆದಿ ಭಾಸ್ಕರ ಸದ್ಗುರುವು ವಾಸವಿ ವಿರೂಪಾಕ್ಷರ ಉಪನಯನ ವೇದಾರಂಭ ಸಂಸ್ಕಾರಗಳನ್ನು ಮಾಡಿಸಿ ಸಂತುಷ್ಟನಾಗಿ ಅವರಿಂದ ಚತುರ್ವೇದಗಳನ್ನು, ಸಮಸ್ತ ಶಾಸ್ತ್ರಗಳನ್ನು, ಕಲೆಗಳನ್ನು ಅಭ್ಯಾಸಮಾಡಿಸಿದರು. ವಾಸವಿ ವಿರೂಪಾಕ್ಷರು ಗುರುಗಳನ್ನು ನಿಮಿತ್ತ ಮಾತ್ರಮಾಡಿಕೊಂಡು ಅತಿಶ್ರೀಘ್ರವಾಗಿ ವೇದ ವೇದಾಂಗಗಳನ್ನು ಷಟ್ಶಾಸ್ತ್ರಗಳನ್ನು ಚತು ಷ್ಷಷ್ಟಿಕಲೆಗಳೆಂಬ ಹೆಸರಿನ (ಅರವತ್ನಾಲ್ಕು 64) ವಿದ್ಯೆಗಳನ್ನು ತಾವೇ ಅಭ್ಯಸಿಸಿದರು. ಕ್ರಮವಾಗಿ ಅವರಿಬ್ಬರು ಯೌವ್ವನಶ್ರೀಯನ್ನು ಹೊಂದಿದರು.

[**ಸೂಚನೆ:** (1) ಸಂಧ್ಯಾವಂದನೆಯ ವಿಧಾನವನ್ನು ಸವಿವರವಾಗಿ ತಿಳಿಯಬಯಸಯವವರು ಮಂತ್ರಾರ್ಥಕ್ರಿಯಾವಿವರಣೆ ಸಹಿತವಾಗಿ ಡಿ. ಕೊಲ್ಲಿಪುರ ಪಾಂಡುರಂಗರಾವ್‌ರವರು ರಚಿಸಿದ **ಸಂಧ್ಯಾವಂದನಮು** ಎಂಬ ಕಿರುಹೊತ್ತಿಗೆಯನ್ನು ಓದಬೇಕೆಂದು ಮನವಿ.

(2) ಅತ್ಯಂತ ಗುಹ್ಯವೂ ಅನಂತ ಮಹಿಮಾನ್ವಿತವೂ ಆದ ಗಾಯತ್ರೀ ಮಂತ್ರ ಮಹತ್ವವನ್ನು ತಿಳಿದುಕೊಳ್ಳಲು ಡಿ. ಕೊಲ್ಲಿಪುರ ಪಾಂಡುರಂಗರಾವ್‌ರವರು ಬರೆದಿರುವ **ಗಾಯತ್ರೀ ವಿಜ್ಞಾನ ಸಾರಮು** ಎಂಬ ಕಿರುಹೊತ್ತಿಹೆಯನ್ನು ಓದಬೇಕೆಂದು ಮನವಿ.]